

ಇಂಡಿಯನ್ ಸೂಪರ್ ಲೀಗ್ ಟೂರ್ನಿಯಲ್ಲಿ ಬೆಂಗಳೂರು ಎಫ್.ಸಿ. ಹಾಗೂ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡಗಳ ನಡುವಿನ ಪೈಪೋಟಿಯ ಕ್ಷಣ

# ಐಎಸ್ಎಲ್ ಫುಟ್‌ಬಾಲ್‌ಗೆ ಕೊಟ್ಟಿದ್ದೇನು?

■ ಪ್ರಮೋದ ಕುಲಕರ್ಣಿ

**ಭಾರತದ ಫುಟ್‌ಬಾಲ್‌ನಲ್ಲಿ ಬದಲಾವಣೆ ತಂದ ಇಂಡಿಯನ್ ಸೂಪರ್ ಲೀಗ್ (ಐಎಸ್ಎಲ್) ಟೂರ್ನಿ ದೇಶದಲ್ಲಿ ಈಗಾಗಲೇ ಆರಂಭವಾಗಿದ್ದು ಮೇ 11ರವರೆಗೆ ನಡೆಯಲಿದೆ. ಕಾಲ್ಚಳಕದ ಸೊಬಗು ಹೊಂದಿರುವ ಈ ಟೂರ್ನಿಯಿಂದಾಗಿ ದೇಶಕ್ಕೆ ಸಿಕ್ಕಿದ್ದು ಏನು, ರಾಷ್ಟ್ರೀಯ ಫುಟ್‌ಬಾಲ್ ತಂಡಕ್ಕೆ ಕಾಡುತ್ತಿರುವ ಕೊರಗು ಏನು? ಎನ್ನುವುದರ ಅವಲೋಕನ ಇಲ್ಲಿದೆ.**

ಅದು ಭಾರತದಲ್ಲಿ ಲೀಗ್‌ಗಳು ಆರಂಭವಾಗಿದ್ದ ಪರ್ವಕಾಲ. ಮಿಲಿಯನ್ ಡಾಲರ್ ಬೇಬಿ ಎನಿಸಿಕೊಂಡ ಐಪಿಎಲ್ 2008ರಲ್ಲಿ ಶುರುವಾಗಿ ಕಡಿಮೆ ವರ್ಷಗಳಲ್ಲಿ ಹೆಚ್ಚು ಖ್ಯಾತಿ, ಹಣ, ಯಶಸ್ಸು, ಹೊಸ ಆಟಗಾರರಿಗೆ ತಾರಾ ವರ್ಚಸ್ಸು ತಂದುಕೊಟ್ಟ ಟೂರ್ನಿಯದು.

ಇದರ ಪ್ರಭಾವದ ಬಳಿಕ ಕುಸ್ತಿ, ಬಾಕ್ಸಿಂಗ್, ಕಬಡ್ಡಿ, ವಾಲಿಬಾಲ್ ಹೀಗೆ ಅನೇಕ ಕ್ರೀಡೆಗಳು ಹೊಸ ಸ್ವರೂಪದಲ್ಲಿ ಜನರ ಮುಂದೆ ಬಂದವು. ಅದರಲ್ಲಿ ಇಂಡಿಯನ್ ಸೂಪರ್ ಲೀಗ್ (ಐಎಸ್ಎಲ್) ಟೂರ್ನಿಯೂ ಒಂದು. ಜಗತ್ತಿನ ಫುಟ್‌ಬಾಲ್ ನಕ್ಷೆಯಲ್ಲಿ ಪ್ರಾಬಲ್ಯ ಹೊಂದಿರುವ ಸ್ಪೇನ್, ಅರ್ಜೆಂಟೀನಾ, ಫ್ರಾನ್ಸ್, ಇಂಗ್ಲೆಂಡ್, ಬ್ರೆಜಿಲ್, ಪೋರ್ಚುಗಲ್, ನೆದರ್ಲೆಂಡ್ಸ್, ಮೊರಾಕ್ಕೊ, ಬೆಲ್ಜಿಯಂ ಹೀಗೆ ಅನೇಕ ರಾಷ್ಟ್ರಗಳಿಗೆ ಹೋಲಿಸಿದರೆ ಫುಟ್‌ಬಾಲ್‌ನಲ್ಲಿ ಭಾರತ ವಿಶ್ವಮಟ್ಟದಲ್ಲಿ ಪ್ರಸಿದ್ಧಿ ಪಡೆದಿಲ್ಲ. ಫಿಫಾ ರ‍್ಯಾಂಕಿಂಗ್‌ನಲ್ಲಿ ಭಾರತದ್ದು 141ನೇ ಸ್ಥಾನ.

ಭಾರತದಲ್ಲಿ ಫುಟ್‌ಬಾಲ್ ಕ್ರೀಡೆ ಒಂದು ದಶಕದ ಹಿಂದಕ್ಕೆ ಹೋಲಿಸಿದರೆ ಐಎಸ್ಎಲ್ ಆರಂಭವಾದ ಬಳಿಕ ಹಂತಹಂತವಾಗಿ ಬೆಳವಣಿಗೆ ಕಾಣುತ್ತಿದೆ. 2012ರಲ್ಲಿ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಸಹಯೋಗದಲ್ಲಿ ಆರಂಭವಾದ ಐಎಸ್ಎಲ್ ಟೂರ್ನಿ ದೇಶದ ವೃತ್ತಿಪರ ಆಟಗಾರರಲ್ಲಿನ ಪ್ರತಿಭಾ ಅನಾವರಣಕ್ಕೆ ವೇದಿಕೆಯಾಗಿದೆ. ದೇಶದ ಪ್ರತಿಷ್ಠಿತ 14 ಕ್ಲಬ್‌ಗಳು ಪಾಲ್ಗೊಳ್ಳುತ್ತವೆ.

19ನೇ ಶತಮಾನದಲ್ಲಿ ದೇಶದಾದ್ಯಂತ ಪ್ರಾರಂಭವಾದ ಡುರಾಂಡ್ ಕಪ್ ಟೂರ್ನಿಯೊಂದಿಗೆ ಫುಟ್‌ಬಾಲ್ ವಿವಿಧ ರೂಪಗಳಲ್ಲಿ ಅಸ್ತಿತ್ವದಲ್ಲಿದೆ. ಈ ಟೂರ್ನಿ 1996ರಲ್ಲಿ ಅರೆ ವೃತ್ತಿಪರ ರಾಷ್ಟ್ರೀಯ ಟೂರ್ನಿಯಾಗಿತ್ತು. 2006ರಲ್ಲಿ ಐ ಲೀಗ್ ಎಂದು ಮರುರೂಪಿಸಿದರೂ ಜನಪ್ರಿಯತೆ ಗಳಿಸಿಕೊಳ್ಳಲು, ವರ್ಚಸ್ಸು ಉಳಿಸಿಕೊಳ್ಳಲು ಹೆಣಗಾಡಬೇಕಾಯಿತು. ಐಎಸ್ಎಲ್ ಆಗಿ 2012ರಲ್ಲಿ ಹೊಸ ಮಾದರಿಯೊಂದಿಗೆ ಟೂರ್ನಿ ಆರಂಭವಾಯಿತು.

ಐಎಸ್ಎಲ್ ಆರಂಭದಿಂದಾಗಿ ಭಾರತದಲ್ಲಿ ಕ್ರೀಡಾಂಗಣದ ಮೂಲಸೌಕರ್ಯ, ತರಬೇತಿ, ತಳಮಟ್ಟದ ಅಭಿವೃದ್ಧಿಯಲ್ಲಿ ಹೂಡಿಕೆ, ಕ್ರೀಡೆಗೆ ವೃತ್ತಿಪರ ಸ್ಪರ್ಶ ಸಿಕ್ಕಿದೆ. ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ, ಗುಣಮಟ್ಟದ ಸ್ಪರ್ಧೆಯು ರಾಷ್ಟ್ರೀಯ ತಂಡದ ಆಟಗಾರರನ್ನು ಬೆಳಕಿಗೆ ತಂದಿದೆ. ಕಾರ್ಪೊರೇಟ್ ಪ್ರಾಯೋಜಕತ್ವ, ಟೆಂಡರ್ ಯೋಜನೆಗಳಿಂದ ವಾಣಿಜ್ಯ ಮಾದರಿ ನಿರ್ಮಾಣ ಸಾಧ್ಯವಾಗಿದೆ.

ಐಎಸ್ಎಲ್ 2026ರ ಫೆಬ್ರುವರಿಯಲ್ಲಿ ಆರಂಭವಾಗಿದ್ದು ಮೇ 17ರ ತನಕ ನಡೆಯಲಿದೆ. 91 ಪಂದ್ಯಗಳು ನಿಗದಿಯಾಗಿವೆ. 137 ವರ್ಷಗಳ ಭವ್ಯ ಇತಿಹಾಸ